ತೆಗೆದುಕೊಂಡಿರುತ್ತದೆ. ಸಾತನೂರಿನಲ್ಲಿ 60.00 ಲಕ್ಷ ರೂ. ವೆಚ್ಚದಲ್ಲಿ ಒಂದು ನರ್ಸರಿಯನ್ನು ಪ್ರಾರಂಭಿಸುತ್ತದೆ.

ಕಾಡುಕೊತ್ತನ ಹಳ್ಳಿಯಲ್ಲಿ ಹರಿಜನರಿಗೆ ನಿವೇಶನಗಳನ್ನು ಹಂಚುವುದು

2226 - ಶ್ರೀ ಕೆ.ಎನ್. ನಾಗೇಗೌಡ (ಕಿರುಗಾವಲು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮಂಡ್ಯ ಜಿಲ್ಲೆ ಸಿ.ಎ. ಕೆರೆ ಹೋಬಳಿ ಕಾಡುಕೊತ್ತನಹಳ್ಳಿ ಸ.ನ. 209 ರಲ್ಲಿನ ಜಮೀನನ್ನು 20ವರ್ಷಗಳಿಂದ ನಿವೇಶನವಿಲ್ಲದೆ ಇರುವ ಪರಿಶಿಷ್ಟಜಾತಿಯವರಿಗೆ ಹಂಚಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಆ) ಕೆಲವು ಎಕರೆಯನ್ನು ಸ್ಮಶಾನಕ್ಕೆ ಈಗಾಗಲೇ ಬಿಟ್ಟಿರುವುದು ನಿಜವೇ?

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) :

ಅ) ಪ್ರಸ್ತಾಪಿತ ಜಮೀನು ಸರ್ಕಾರಿ ಕೆರೆ ಅಂಗಳವಾಗಿದ್ದು ಜೌಗಿನಿಂದ ಕೂಡಿದ ಜಮೀನಿನಲ್ಲಿ ಕಟ್ಟಡ ನಿರ್ಮಿಸಲು ಯೋಗ್ಯವಾಗಿರುವುದಿಲ್ಲ. ಆದಕಾರಣ, ಸದರಿ ಜಮೀನಿನಲ್ಲಿ, ನಿವೇಶನ ಹಂಚುವ ಬಗ್ಗೆ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ.

ಆ) ಹೌದು. ಸದರಿ ಜಮಿನಿನಲ್ಲಿ 2-00 ಎಕರೆಯನ್ನು ಹರಿಜನರ ಸ್ಮಶಾನಕ್ಕಾಗಿ ಕಾಯ್ದಿರಿಸಿದೆ.

ಬಿಜಾಪುರ ಕೈಗಾರಿಕಾ ಸಹಕಾರಿ ಬ್ಯಾಂಕ್‌ನ ಸಿಬ್ಬಂದಿ

2206 - ಶ್ರೀ ಜೆ.ಟಿ. ಪಾಟೀಲ್ (ಬೀಳಗಿ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸಮಾಪನೆಗೊಂಡ ದಿ ಬಿಜಾಪುರ ಕೈಗಾರಿಕಾ ಸಹಕಾರ ಬ್ಯಾಂಕ್ ನ, ಬಾಗಲಕೋಟೆ ಇದರ 10 ಜನ ಸಿಬ್ಬಂದಿಗಳು ಇಂದು ಬೀದಿ ಪಾಲಾಗಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಈ ಸಿಬ್ಬಂದಿಗೆ ಸರ್ಕಾರದ ಯಾವುದೇ ಇಲಾಖೆಯಲ್ಲಾಗಲೀ ಅಥವಾ ನಿಗಮಗಳಲ್ಲಾಗಲೀ ಅಥವಾ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳಲ್ಲಾಗಲೀ ಉದ್ಯೋಗ ದೊರಕಿಸಿಕೊಡುವ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು?

ಇ) ಈ ಬಗ್ಗೆ ಇದುವರೆವಿಗೂ ಕ್ರಮ ತೆಗೆದುಕೊಳ್ಳದಿದ್ದಲ್ಲಿ ಯಾವಾಗ ಕ್ರಮ ತೆಗೆದುಕೊಳ್ಳಲಾಗುವುದು?

ಶ್ರೀ ಎಸ್.ಎಸ್. ಪಾಟೀಲ್ (ಸಹಕಾರ ಸಚಿವರು) :

ಅ) ದಿ ಬಿಜಾಪುರ ಕೈಗಾರಿಕಾ ಸಹಕಾರ ಬ್ಯಾಂಕನ್ನು ದಿನಾಂಕ 31-08-1994ರಂದು ಸಮಾಪನೆಗೊಳಿಸಲಾದ ಕಾರಣ ದಿನಾಂಕ 30-4-1995ರಂದು ನೌಕರರನ್ನು ಬ್ಯಾಂಕಿನ ಸೇವೆಯಿಂದ ತೆಗೆದು ಹಾಕಲಾಗಿದೆ.

ಆ) ಸಮಾಪನೆಗೊಂಡ ಸಹಕಾರ ಬ್ಯಾಂಕಿನ ನೌಕರರು ಸರ್ಕಾರದ ನೌಕರರಲ್ಲವಾದ್ದರಿಂದ ಯಾವುದೇ ಸರ್ಕಾರಿ ಇಲಾಖೆಯಲ್ಲಾಗಲೀ ಅಥವಾ ನಿಗಮಗಳಲ್ಲಾಗಲೀ ಉದ್ಯೋಗ ದೊರಕಿಸಿಕೊಡುವ ಪ್ರಶ್ನೆ ಉದ್ಭವಿಸುವುದಿಲ್ಲ. ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳೂ ಸಹ ಸ್ವತಂತ್ರ ಸಂಸ್ಥೆಗಳಾದ್ದರಿಂದ ಅಲ್ಲಿಯೂ ಉದ್ಯೋಗ ದೊರಕಿಸಿಕೊಡುವ ಸಾಧ್ಯತೆ ಇಲ್ಲ. ಯಾವುದೇ ಸಂಸ್ಥೆ ಸಮಾಪನಾ ಸ್ಥಿತಿಗೆ ಬರುವುದರಲ್ಲಿ ನೌಕರರ ಪಾತ್ರ ಗಣನೀಯವಾಗಿರುತ್ತದೆ ಎಂಬ ಅಂಶವನ್ನು ಮನಗಾಣಬಹುದು. ಆದಾಗ್ಯೂ ಈ ನೌಕರರು ಅರ್ಜಿ ಹಾಕಿಕೊಂಡಲ್ಲಿ ಮತ್ತು ಸೂಕ್ತರು ಎಂದು ಕಂಡು ಬಂದಲ್ಲಿ ಮಾನವೀಯ ದೃಷ್ಟಿಯಿಂದ ಈ ನೌಕರರನ್ನು ನೇಮಕ ಮಾಡಿಕೊಳ್ಳಲು ಹೊಸದಾಗಿ

ನೋಂದಣಿಯಾಗಿರುವ ಪಟ್ಟಣ ಸಹಕಾರ ಬ್ಯಾಂಕುಗಳನ್ನು ಸಹಕಾರ ಸಂಘಗಳ ನಿಬಂಧಕರು ತಮ್ಮ ಪತ್ರ ಸಂ. ಯುಬಿಸಿ :58 : ಯುಎಂಸಿ-1:94-95 : ದಿನಾಂಕ 6-12-94ರ ಮೂಲಕ ಕೋರಿರುತ್ತಾರೆ.

ಇ) ಕಂಡಿಕೆ 'ಅ' ಗೆ ನೀಡಿರುವ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಕೃಷಿ ಮಾರುಕಟ್ಟೆಗಳಲ್ಲಿ ದಲಾಲರಿಂದ ರೈತರಿಗೆ ತಕ್ಷಣ ಹಣ ಸಂದಾಯ

1666 - ಶ್ರೀ ಡಿ.ಆರ್. ಪಾಟೀಲ್ (ಗದಗ್) : ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಕೃಷಿ ಮಾರುಕಟ್ಟೆಗಳಲ್ಲಿ ಕಾನೂನು ಪ್ರಕಾರ ಮಾರಾಟ ಮಾಡಿದ ರೈತರಿಗೆ ಅಂದೇ ಹಣ ಸಂದಾಯ ಮಾಡುವುದು ದಲಾಲರ ಜವಾಬ್ದಾರಿ ಅಲ್ಲವೇ, ಅದೇ ರೀತಿ ವ್ಯಾಪಾರಸ್ಥರು, ತಾವು ಖರೀದಿಸಿದ ಮಾಲಿನ ಹಣವನ್ನು 7 ದಿವಸಗಳ ಒಳಗಾಗಿ ದಲಾಲರಿಗೆ ಸಂದಾಯ ಮಾಡುವುದು ಕಾನೂನಿನ್ವಯ ಅವರ ಜವಾಬ್ದಾರಿ ಅಲ್ಲವೇ.*

ಆ) *ಜವಾಬ್ದಾರಿಯನ್ನು ನಿಭಾಯಿಸಲು ವಿಫಲರಾದ ದಲಾಲರ ಮತ್ತು ವ್ಯಾಪಾರಸ್ಥರ ಸಂಖ್ಯೆ ಎಷ್ಟು. ಇದು ಒಟ್ಟು ದಲಾಲರ - ವ್ಯಾಪಾರಸ್ಥರ ಸಂಖ್ಯೆಯ ಪ್ರತಿ ಶತ ಎಷ್ಟು? (ಎಪಿಎಂಸಿವಾರು ಒದಗಿಸುವುದು)*

ಇ) *ಈ ರೀತಿ ಕಾನೂನು ಬಾಹಿರ ಕ್ರಮ ನಿಲ್ಲಿಸಲು ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು? ಅವುಗಳನ್ನು ಕಟ್ಟುನಿಟ್ಟಾಗಿ ಎಷ್ಟು ದಿನಗಳಲ್ಲಿ ಅನುಷ್ಠಾನಗೊಳಿಸಲಾಗುವುದು?*

ಶ್ರೀ ಬಿ.ಬಿ. ನಿಂಗಯ್ಯ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು) :

ಅ) ಹೌದು

ಮಾರುಕಟ್ಟೆ ಸಮಿತಿಗಳ ಉಪ ನಿಯಮಗಳಲ್ಲಿ ನಿಗದಿಪಡಿಸಿರುವಂತೆ 7 ರಿಂದ 15 ದಿನಗಳವರೆಗೆ ಖರೀದಿದಾರರು ದಲಾಲರಿಗೆ ಸಂದಾಯ ಮಾಡಲು ಅವಕಾಶವಿದೆ.

ಆ) ಎ.ಪಿ.ಎಂ.ಸಿ. ವಾರು ತಃಖ್ತೆ ಲಗತ್ತಿಸಿದೆ.

ಇ) ಹತ್ತಿ ಹೊರತುಪಡಿಸಿ, ಉಳಿದ ಅಧಿಸೂಚಿತ ಕೃಷಿ ಉತ್ಪನ್ನಗಳ ಮಾರಾಟದ ಹಣವನ್ನು ನಿಗಧಿತ ಅವಧಿಯೊಳಗೆ ಸಂದಾಯ ಮಾಡಲಾಗುತ್ತಿದೆ. ಹತ್ತಿ ಮಾರಾಟ ವ್ಯವಹಾರದಲ್ಲಿ ಈ ನಿಯಮ ಜಾರಿಗೊಳಿಸಲು ನಷ್ಟ ಸಾಧ್ಯವಾಗಿದೆ. ದಲಾಲರು ರೈತರಿಂದ ಅನಧಿಕೃತವಾಗಿ ರಿವಾಜುಗಳನ್ನು ಸಮುರಿದುಕೊಳ್ಳುವುದನ್ನು ತಪ್ಪಿಸಲು, ದಲಾಲರ ಬದಲು ಮಾರುಕಟ್ಟೆ ಸಮಿತಿಗಳ ಮೂಲಕ ಹಣ ಪಾವತಿ ಮಾಡಲು ಸಾಂಸ್ಥಿಕ ವ್ಯವಸ್ಥೆ ಕಲ್ಪಿಸಬೇಕೆಂಬ ಬೇಡಿಕೆ ಬಗ್ಗೆ ಸಹಕಾರ ಇಲಾಖೆಯ ವಿಷಯ ಸಮಿತಿ ಮಾಡಿರುವ ಶಿಫಾರಸ್ಸುಗಳಿಗೆ ಅನುಗುಣವಾಗಿ ಇತರೆ ರಾಜ್ಯಗಳಲ್ಲಿನ ಮಾರುಕಟ್ಟೆ ಪರಿಸ್ಥಿತಿಯನ್ನು ಅಧ್ಯಯನ ಮಾಡಿ ವರದಿ ಸಲ್ಲಿಸಲು ವಿಷಯ ಸಮಿತಿ ಸದಸ್ಯರನ್ನು ಒಳಗೊಂಡ ನಿಯೋಗ ಹೋಗಲು ತೀರ್ಮಾನಿಸಿದೆ. ಈ ನಿಯೋಗವು ಸರ್ಕಾರಕ್ಕೆ ಸಲ್ಲಿಸುವ ವರದಿಯನ್ನು ಅನುಸರಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು.